

ಸ್ಥಳೀಯ ಭಾಷೆಗಳೇ ಪ್ರಭುತ್ವ ಸಾಧಿಸಬೇಕು. ದೇಸಿ ಭಾಷೆಯೇ ಶಿಕ್ಷಣ ಭಾಷೆ, ಆಡಳಿತ ಭಾಷೆ ಎರಡೂ ಆಗಬೇಕು.

◆ **ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಗಳು ಜನ ಜಾತ್ರೆಯಲ್ಲೇ ಕರಗಿಹೋಗುತ್ತಿವೆ. ವ್ಯವಸ್ಥೆ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲು ಏನು ಮಾಡಬೇಕು?**

ನಾನು ಹಳೆಯ ಭಾಷಣಗಳನ್ನು ನೋಡುತ್ತಿದ್ದೆ. ಹತ್ತು ಹದಿನೈದು ವರ್ಷಗಳಿಂದ ಅವೇ ಪ್ರಶ್ನೆಗಳು ಉಳಿದುಕೊಂಡಿವೆ. ಸುಧಾರಿಸುವ ನಿಟ್ಟಿನಲ್ಲಿ ನಮ್ಮ ವ್ಯವಸ್ಥೆ ಹೋಗೇ ಇಲ್ಲ. ಕೊರೊನಾ ಅವಧಿ ಈ ಬಗ್ಗೆ ಚಿಂತಿಸಲು ನನಗೆ ಅವಕಾಶ ಕೊಟ್ಟಿತು. ಸಮ್ಮೇಳನದ ಅಧ್ಯಕ್ಷರ ಆಗ್ರಹಕ್ಕೆ ಸರ್ಕಾರ ಆದ್ಯತೆಯನ್ನು ಕೊಡಬೇಕು. ಆದರೆ ಅದನ್ನು ನನೆಗುದಿಗೆ ಹಾಕಿ ಅದು ಕುಳಿತಿದೆ. ಅಂದರೆ ಸರ್ಕಾರಕ್ಕೆ ಸಂಕಲ್ಪಬಲ ಇಲ್ಲ. ಸಾಧಿಸುವ ಛಲ ಇದ್ದರೆ ಮಾತ್ರ ಅದನ್ನು ಸಾಧಿಸಲು ಸಾಧ್ಯ. ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡಪರ ಚಿಂತಕರು ಹೇಳಿದ್ದನ್ನೇ ಸರ್ಕಾರವೂ ಹಾಡಿದರೆ ಪ್ರಯೋಜನ ಏನು? ಸಾಹಿತಿಗಳಿಗೆ ಆಡಳಿತಾತ್ಮಕ ಮಿತಿ ಇರುತ್ತದೆ. ಮನಸ್ಸು ಇದ್ದರೆ ಮಾರ್ಗ ಎನ್ನುವುದನ್ನು ಅರಿತು ಸರ್ಕಾರ ಮನಸ್ಸು ಮಾಡಿ ಕನ್ನಡಪರ ಹಕ್ಕೊತ್ತಾಯಗಳನ್ನು ಅನುಷ್ಠಾನ ಮಾಡಬೇಕು. ದುರಂತ ಎಂದರೆ ಆ ಸಂಕಲ್ಪವೇ ಸರ್ಕಾರಕ್ಕಿಲ್ಲ.

◆ **ಜನಪ್ರಿಯ ಸಿನಿಮಾ ಕಥೆ– ಸಂಭಾಷಣೆ– ಗೀತ ಸಾಹಿತ್ಯದ ಗಂಭೀರ ಅಧ್ಯಯನ ಏಕೆ ಆಗುತ್ತಿಲ್ಲ?**

ಸಿನಿಮಾಗೆ ಆದ್ಯತೆ ಕೊಟ್ಟಿಲ್ಲ. ಈಗಿನ ಶಿಕ್ಷಣದಲ್ಲಿ ಅದು ವಿಷಯವೇ ಅಲ್ಲ. ಸ್ನಾತಕೋತ್ತರ ಶಿಕ್ಷಣದಲ್ಲಿ ಸಿನಿಮಾ ಪಠ್ಯ ನಿಗದಿ ಮಾಡಬೇಕು. ಬರವಣಿಗೆಯನ್ನೂ ಗಂಭೀರವಾಗಿ ಓದಬೇಕು. ಸ್ಕ್ರಿಪ್ಟ್–ತಾಂತ್ರಿಕ ಅಂಶವನ್ನು ಬಳಸಿಕೊಳ್ಳುವ ಬಗ್ಗೆ ಚಿಂತಿಸಬೇಕು. ಅದನ್ನು ಯಾವುದೋ ಸಿನಿಮಾ ಇನ್‌ಸ್ಟಿಟ್ಯೂಟ್ ಮಾಡಲು ಆಗುವುದಿಲ್ಲ. ವಿಶ್ವವಿದ್ಯಾಲಯಗಳೇ ಮಾಡಬಹುದು. ವರ್ಷಕ್ಕೆ ಕನಿಷ್ಠ ಆರು ತಿಂಗಳ ಎರಡು ಕೋರ್ಸ್ ಮಾಡಬಹುದು. ಅಲ್ಲಿ ಮೂಲಭೂತ ಅಂಶವನ್ನು ಕಲಿಸಿದರೆ ಮಾತ್ರ ಆದ್ಯತೆ ಸಿಗುತ್ತದೆ. ಸಿನಿಮಾ ಸಾಹಿತ್ಯದಲ್ಲಿ ಏನೋ ಬರೆದಿದ್ದಾರೆ ಎನ್ನುವಂತಿಲ್ಲ. ಇದಕ್ಕೆ ಕೆಲವೊಂದು ಅಪವಾದ ಇರಬಹುದು. ಏನೋ ಬರಿಯುವ ಹಾಗಿಲ್ಲ. ಯಶಸ್ವಿ ಸಿನಿಮಾ ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆ, ಹಾಡು, ಭಾವನೆಯನ್ನು ಪ್ರಕಟಿಸುತ್ತದೆ. ಯಾವುದೇ ಒಂದು ಹಾಡನ್ನು ಸನ್ನಿವೇಶದಿಂದ ಹೊರತಂದರೆ ಅದೊಂದು ಭಾವ ಗೀತೆಯಾಗುತ್ತದೆ. ಅದಕ್ಕೊಂದು ಅಸ್ತಿತ್ವ ಇರುತ್ತದೆ. ನಾನು ನಿತ್ಯ ಒಂದು ಸಿನಿಮಾ ನೋಡುತ್ತೇನೆ. ಹೀಗಾಗಿ ಅದರ ಪರಿಭಾಷೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಆಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

# ಹೊಸ ವರ್ಷಕ್ಕೇನು ರೆಸಲ್ಯೂಷನ್?

■ **ಲತಾ ಹೆಗಡೆ**

ಮಾಗಿಯ ಮೈಕೊರೆವ ಚಳಿ ನಡುವೆಯೇ ಹೊಸ ಆಕಾಂಕ್ಷೆ, ಭರವಸೆ, ನಿರೀಕ್ಷೆಗಳ ಮೂಟೆ ಹೊತ್ತು ಯುಗಪುರುಷ ಮತ್ತೊಮ್ಮೆ ಉತ್ಸಾಹದಿಂದ ಕಾಲಿಡುತ್ತಿದ್ದಾನೆ. ಹೊಸ ಮನ್ವಂತರಕ್ಕೆ ಮುನ್ನುಡಿ ಬರೆದಿದ್ದಾನೆ. ಎಲ್ಲೆಲ್ಲೂ ಹೊಸ ವರುಷದ ಕಳೆ...

ಹೊಸ ವರ್ಷ ಎಂದ ಮೇಲೆ ಹೊಸ ಹೊಸ ನಿರ್ಣಯಗಳು, ಅವನ್ನು ಪಾಲಿಸುವ ಹೊಸ ಹುರುಪು ಇರಲೇಬೇಕಲ್ಲವೇ? ಇತ್ತೀಚಿನ ವರ್ಷಗಳಲ್ಲಂತೂ ಹೊಸ ವರ್ಷಕ್ಕೆ ಹೊಸ ನಿರ್ಣಯಗಳನ್ನು ಕೈಗೊಳ್ಳುವುದು, ಅವುಗಳನ್ನು ಅಷ್ಟೇ ಜರೂರಾಗಿ ಮುರಿಯುವುದು ಕೂಡ ಮಾಮೂಲಿ ಆಗಿಬಿಟ್ಟಿದೆ. ಈ ಹೊಸ ವರ್ಷ ನಾನು ಹೀಗಿರಬೇಕು, ಇಂತಿಷ್ಟು ಕೆಲಸ ಮಾಡಬೇಕು, ಇಲ್ಲಿಲ್ಲಿಗೆ ಹೋಗಬೇಕು, ಇಂಥವರನ್ನು ಭೇಟಿ ಮಾಡಬೇಕು, ಈ ಪುಸ್ತಕಗಳನ್ನು ಓದಬೇಕು... ಹೀಗೆ ನಿರ್ಣಯಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಮೊದಮೊದಲು ನನಗದು ಭಾರೀ ಮೋಜೆನಿಸಿತ್ತು. ಯಾರು ತಾವಂದುಕೊಂಡಿದ್ದನ್ನು ಎಷ್ಟು ಪಾಲಿಸಿದ್ದಾರೆಂಬುದನ್ನು ಪರೀಕ್ಷಿಸಿ ಕಾಲೆಳೆಯುವುದನ್ನೇ ಮಾಡುತ್ತಿದ್ದೆ. ಆಮೇಲೆ, ನಾನೂ ಹೊಸ ವರ್ಷಕ್ಕೆ ಕೆಲವು ನಿರ್ಣಯಗಳನ್ನು ತೆಗೆದುಕೊಂಡು, ಅವುಗಳನ್ನು ಪಾಲಿಸಿ ಸೈ ಎನಿಸಿಕೊಳ್ಳಬೇಕೆಂಬ ನಿರ್ಧಾರ ಮಾಡಿಕೊಂಡೆ! ನಾನಂತೂ ಎಲ್ಲರಂತಲ್ಲ, ಒಮ್ಮೆ ನಿರ್ಧಾರ ಕೈಗೊಂಡೆನೆಂದರೆ ಸಾಕು, ಪಾಲಿಸುವುದು ಚಿಟಿಕೆ ಹೊಡೆದಷ್ಟೇ ಸುಲಭವೆಂದು ಅತಿಯಾದ ಆತ್ಮವಿಶ್ವಾಸದಿಂದ ಬೀಗಿದ್ದೂ ಉಂಟು.

ಆದರದು ಕಾಲೆಳೆದಷ್ಟು ಸುಲಭವಲ್ಲವೆಂಬ ದಿವ್ಯ ಜ್ಞಾನೋದಯ ನಮ್ಮ ಪುಟ್ಟ ಮನೆಯ ತಾರಸಿಯಡಿಯಲ್ಲೇ ಆಯಿತು. ಆದರೂ ಸೋಲೊಪ್ಪಿಕೊಳ್ಳುವ ಜಾಯಮಾನ ನನ್ನದಲ್ಲ. ಆರಂಭಶೂರಳಾಗಿ ಮತ್ತೆಮತ್ತೆ ಹೊಸ ನಿರ್ಣಯಗಳಿಗೆ ಜೋತುಬೀಳುವುದು, ನಂತರ ಸೋಲಿಗೆ ಶರಣಾಗುವ ಸೀನು ಇದ್ದದ್ದೇ.

ನಿರ್ಣಯ ಕೈಗೊಳ್ಳುವಾಗ ಸರಳಾತಿಸರಳವೆನ್ನಿಸಿದ್ದು ಪಾಲಿಸುವ ನಿಟ್ಟಿನಲ್ಲಿ ಮಾತ್ರ ಕಠಿಣವೆನ್ನಿಸುವುದು ಏಕೆಂಬುದೇ ಇಂದಿಗೂ ತಿಳಿಯದ ಯಕ್ಷಪ್ರಶ್ನೆ. ಕೆಲವು ವರ್ಷಗಳ ಹಿಂದೆ, 'ಯಾರನ್ನೂ ಸುಖಾಸುಮ್ಮನೆ ಸಂಶಯಿಸಬಾರದು, ಅವರಾಡುವ ಮಾತಲ್ಲಿ ಅಪಾರ್ಥ ಹುಡುಕಬಾರದು' ಎಂಬ ಸರಳ (ಹಾಗೆಂದುಕೊಂಡಿದ್ದೆ!) ನಿರ್ಣಯ ಕೈಗೊಂಡಿದ್ದೆ. ಅದನ್ನು ಪಾಲಿಸುವ ಹುರುಪಿನಲ್ಲಿ ದಿನಗಳೂ ಯಶಸ್ವಿಯಾಗಿ ಸರಿದಿದ್ದವು.

ಅದೊಂದು ದಿನ ಶಿಸ್ತಾಗಿಯೇ ತಯಾರಾಗಿ ಹೊರಟಿದ್ದೆ. 'ಯಾಕ್ರೀ ಆರಾಂ ಇಲ್ಲೇನು ಇಷ್ಟ್ಯಾಕ್ ಸೊರ್ಗೀರಿ? ಹಿಂಗ್ಯಾಕ ನಡ್ಯಾಕತ್ತೀರಿ?' ಎದುರಿಗೆ ಸಿಕ್ಕ ಪರಿಚಯಸ್ಥರು ಕೇಳಿದ್ದರು. ಇವರೋ ಕೊಂಕಿಗೆ ನಿಸ್ಸೀಮರು. ಬೇಕೆಂದೇ ಕೇಳುತ್ತಿರಬೇಕು ಎನಿಸಿ, 'ನನಗೇನಾಗಿದೆ ಧಾಡಿ, ಗುಂಡ್ಕಲ್ಲಿನಂತೆ ಇದ್ದೀನಿ. ಯಾಕೆ, ಸರಿಯಾಗಿ ಕಾಣ್ತಿಲ್ವೇ? ಕಣ್ಣಿಗೇನೋ ಐಬಾಗಿರ್ಬಹುದು ಅನ್ಸುತ್ತೆ, ಬೇಗ ತೋರಿಸ್ಕೊಳ್ಳಿ' ಎಂದು ಮುಖಕ್ಕೆ ಹೊಡೆದಂತೆ ಉತ್ತರಿಸಿ ನಡೆದಿದ್ದೆ!

ಅದೇ ಗುಂಗಲ್ಲಿ ನಡೆದು ಹೋಗುತ್ತಿದ್ದವಳಿಗೆ ಅನ್ನಿಸಿತ್ತು, ನಿರ್ಣಯವನ್ನು ಪಾಲಿಸುವುದು ಸುಲಭವಲ್ಲವೆಂದು. ಅವರೇನೋ ಸಹಜವಾಗಿಯೇ ಕೇಳಿರಬಹುದು. ಅವರ ಕಳಕಳಿಯನ್ನು ಸಂಶಯಿಸಿದ್ದು ಸರಿಯೇ? ಯಾರದ್ದೇ ಮಾತಲ್ಲೂ ಅಪಾರ್ಥ ಕಲ್ಪಿಸಬಾರದು; ಹಾಗೆನ್ನಿಸಿದರೂ ಅವಸರದ ಪ್ರತಿಕ್ರಿಯೆ ಕೂಡದು. ಅಹಂಕಾರಿಗೆ ಉದಾಸೀನವೇ ಮದ್ದು ಎಂದುಕೊಂಡು ಸುಮ್ಮನಿದ್ದುಬಿಡಬೇಕು ಹೀಗೆಲ್ಲಾ ಮನನ ಮಾಡಿಕೊಂಡು ಪಾಲಿಸಬೇಕೆಂದಿರುವ ನಿರ್ಣಯವನ್ನು ಜಾರಿಗೊಳಿಸಲು ಮತ್ತೆ ಗಟ್ಟಿನಿರ್ಧಾರ ಮಾಡಿದ್ದಾಯಿತು. ನಾಯಿಬಾಲ ಡೊಂಕೆಂಬಂತೆ ಅಪಾರ್ಥ ಮಾಡಿಕೊಳ್ಳುವ ಹಳೆ ಚಾಳಿಗೆ ಜೋತುಬಿದ್ದದ್ದು ಮಾತ್ರ ಅದೆಷ್ಟನೆ ಬಾರಿಯೋ?

ಜನರ ವಿಷಯ ಬಿಡಿ, ಯಾರ ಉಸಾಬರಿಯೂ ಬೇಡ ಎಂದು ಮನೆ ಕೆಲಸ ಮುಗಿಸಿ ಟೀವಿಯಲ್ಲಿ ಧಾರಾಕಾರವಾಗಿ ಹರಿದು ಬರೋ ಧಾರಾವಾಹಿಗಳನ್ನು ನೆಚ್ಚಿಕೊಂಡು ಕೂತದ್ದಾಗಿತ್ತು. ಚರ್ವಿತಚರ್ವಣ ಸೂತ್ರಕ್ಕೆ ಜೋತುಬಿದ್ದು ಆಮೆವೇಗದಲ್ಲಿರುವ ಅವುಗಳ ಗತಿ ಅಸಹನೀಯವಾಗಿ, ತಾಳ್ಮೆ ಪರೀಕ್ಷೆಗೊಳಗಾಗಿ ಸಂಕಟಪಡುತ್ತಿತ್ತು. ಜೊತೆಗೆ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬುದನ್ನೇ ಬೀಜಮಂತ್ರವಾಗಿಸಿ ವೈಭವೀಕರಿಸಿ ವಿಜೃಂಭಿಸುವುದು ರುಚಿಸದೆ, 'ಖಳನಾಯಕಿಯರಿರುವ ಧಾರಾವಾಹಿಯನ್ನು ಇನ್ನು ನೋಡಲಾರೆ' ಎಂದು ಹೊಸ ವರ್ಷದ ಮತ್ತೊಂದು ನಿರ್ಧಾರ ಮಾಡಿದ್ದೂ ಆಗಿತ್ತು. ಒಂದೆರಡು ವಾರ ಕಳೆದಿರಲಿಲ್ಲ, ಸಂಕಲ್ಪ ಅದ್ಯಾವ ಮಾಯದಲ್ಲೋ ಗಾಳಿಪಾಲಾಗಿ, ಖಳನಾಯಕಿಯರ ಸುಳಿಯಲ್ಲಿ ಸಿಲುಕಿ ನಲುಗುತ್ತಿರುವ, ಬಾಯಲ್ಲಿ ಬೆರಳಿಟ್ಟರೆ ಕಚ್ಚಲೂ ಅರಿಯದ ಗೋವಿನಂತಹ ಮುಗ್ಧ ಸ್ವಭಾವದ ನಾಯಕಿಯ ಕಷ್ಟಕ್ಕೆ ಸ್ಪಂದಿಸುತ್ತಾ ನಾನೂ ನಲುಗಿ, ಗೋಳಾಡುವುದು ನಿರಂತರವಾಗಿದೆ!

ಬೆಂಬಿಡದ ತ್ರಿವಿಕ್ರಮನಂತೆ ನಿರ್ಣಯಗಳನ್ನು ಪದೇ ಪದೇ ಹಮ್ಮಿಕೊಂಡೆನಾದರೂ ಸೋತು ಸುಣ್ಣವಾಗಿ ದ್ರಾಕ್ಷಿಯೇ ಹುಳಿ ಎಂಬ ಗುಳ್ಳೇನರಿಯ ತೀರ್ಮಾನಕ್ಕೆ ಬದ್ಧಳಾದದ್ದೂ ಆಗಿದೆ. ಬೇಕಿದ್ದಲ್ಲಿ ಈ ನಿರ್ಣಯಗಳನ್ನು ತಾವೂ ಯತ್ನಿಸಿನೋಡಿ!

ಪ್ರತಿಕ್ರಿಯಿಸಿ: feedback@sudha.co.in